**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 676 (837) |
| 2) | ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ<br>(ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದದಿ ನಾಂಕ: | : | 10.03.2026 |
| 4) | ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಮೂಲಕ ರಸ್ತೆ, ರೈಲು ಹಾಗೂ ವೈಮಾನಿಕ ಮೂಲಸೌಲಭ್ಯ ಯೋಜನೆಗಳಿಗೆ ಸಂಬಂಧಿಸಿದಂತೆ ಎಷ್ಟು ಯೋಜನೆಗಳಿಗಾಗಿ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿದೆ; ಅವುಗಳಿಗೆ ಅಗತ್ಯವಿರುವ ಭೂಮಿ ಪ್ರಮಾಣ ಹಾಗೂ ಭೂಸ್ವಾಧೀನ ಪ್ರಗತಿಯ ವಿವರವೇನು;</td><td>ರಾಜ್ಯದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಮೂಲಕ ರೈಲು ಯೋಜನೆಗಳಿಗೆ ಸಂಬಂಧಿಸಿದಂತೆ 9 ನೂತನ ರೈಲು ಮಾರ್ಗ ಯೋಜನೆಗಳು ಪ್ರಗತಿಯಲ್ಲಿವೆ. ಪ್ರಗತಿಯ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ</th><th>ಯೋಜನೆ</th><th>ಅಗತ್ಯ ವಿರುವ ಜಮೀನು</th><th>ಸ್ವಾಧೀನ ಪಡಿಸಿ ಕೊಂಡಿ ರುವ ಜಮೀನು</th><th>ಶೇ. ವಾರು ಸ್ವಾಧೀನ ಪಡಿಸಿ ಕೊಂಡಿ ರುವ ಜಮೀನು</th><th>ಬಾಕಿ ಇರುವ ಜಮೀನು</th><th>ಕಾಮಗಾರಿಯ ಭೌತಿಕ ಪ್ರಗತಿ (%)</th></tr>
<tr><td>1</td><td>ಗಿಣಿಗೇರಾ - ರಾಯಚೂರು</td><td>2425</td><td>2425</td><td>100%</td><td>0</td><td>66%</td></tr>
<tr><td>2</td><td>ತುಮಕೂರು- ರಾಯದುರ್ಗ</td><td>1395.34</td><td>1395.34</td><td>100%</td><td>0</td><td>70%</td></tr>
<tr><td>3</td><td>ಚಿಕ್ಕಮಗಳೂರು- ಬೇಲೂರು</td><td>323.12</td><td>323.12</td><td>100%</td><td>0</td><td>85%</td></tr>
<tr><td>4</td><td>ಬಾಗಲಕೋಟೆ- ಕುಡಚಿ</td><td>2548.22</td><td>2,436.16</td><td>95.61%</td><td>112.06</td><td>38%</td></tr>
<tr><td>5</td><td>ಗದಗ-ವಾಡಿ</td><td>4335.21</td><td>4,079.03</td><td>94.09%</td><td>256.18</td><td>29%</td></tr>
<tr><td>6</td><td>ತುಮಕೂರು- ದಾವಣಗೆರೆ</td><td>2470.35</td><td>2,330</td><td>94.29%</td><td>140.35</td><td>18%</td></tr>
<tr><td>7</td><td>ಬೇಲೂರು- ಹಾಸನ</td><td>546.15</td><td>4.11</td><td>1%</td><td>542.04</td><td>-</td></tr>
<tr><td>8</td><td>ಶಿವಮೊಗ್ಗ- ಶಿಕಾರಿಪುರ- ರಾಣೆಬೆನ್ನೂರು</td><td>1346.20</td><td>1,127.01</td><td>70%</td><td>219.19</td><td>11.5%</td></tr>
<tr><td>9</td><td>ಧಾರವಾಡ- ಬೆಳಗಾವಿ</td><td>1523.21</td><td>0</td><td>0</td><td>1523.21</td><td>-</td></tr>
<tr><td></td><td>ಒಟ್ಟು</td><td>16914.00</td><td>14122.17</td><td>83.48%</td><td>2793.03</td><td></td></tr>
</table></td></tr>
<tr><td>(ಆ)</td><td>ಸರ್ವ ವಿಧ ಸಾರಿಗೆ ಸಂಪರ್ಕಕ್ಕೆ ಅವಕಾಶವಿರುವ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ರಸ್ತೆ, ರೈಲು, ವೈಮಾನಿಕ ಹಾಗೂ ಕಡಲ ಸಂಪರ್ಕ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳಿಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವೆ ಸಮನ್ವಯ ಸಾಧಿಸಲಾಗುತ್ತಿದೆಯೇ;</td><td>ನೈರುತ್ಯ ರೈಲ್ವೆಯ ಮಾಹಿತಿ ಅನುಸಾರ ಉಡುಪಿ ಜಿಲ್ಲೆಯಲ್ಲಿ, ಪ್ರಸ್ತುತ ಯಾವುದೇ ಮಂಜೂರಾದ ಅಥವಾ ಯೋಜಿತ ರೈಲ್ವೆ ಯೋಜನೆಗಳು ಇರುವುದಿಲ್ಲ.<br><br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ರೈಲ್ವೆ ಯೋಜನೆಗಳನ್ನು ಯೋಜಿಸಲಾಗಿದ್ದು, ಈ ಯೋಜನೆಗಳು ಪ್ರಸ್ತುತ ಅಂತಿಮ ಸ್ಥಳ ಸಮೀಕ್ಷೆ ಹಂತದಲ್ಲಿದೆ.<br><br>• ಶಿವಮೊಗ್ಗ- ಶೃಂಗೇರಿ –ಮಂಗಳೂರು ನೂತನ ರೈಲು ಮಾರ್ಗ (332 ಕಿ.ಮೀ).<br>• ಹಾಸನ - ಮಂಗಳೂರು (DL) (247 ಕಿ.ಮೀ).</td></tr>
<tr><td>(ಇ)</td><td>ರಾಜ್ಯದಲ್ಲಿ ರೈಲ್ವೆ ಯೋಜನೆಗಳು ಭೂಸ್ವಾಧೀನ ಪ್ರಕ್ರಿಯೆ,</td><td>ಪ್ರಸ್ತುತ ರಾಜ್ಯ ಸರ್ಕಾರದಿಂದ 9 ನೂತನ ರೈಲು ಮಾರ್ಗ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಸದರಿ</td></tr>
</table>

| | | |
|---|---|---|
| | ಅನುದಾನ ಹಂಚಿಕೆ ಹಾಗೂ ರಾಜ್ಯದ ಪಾಲಿನ ನಿಧಿ ಬಿಡುಗಡೆ ವಿಳಂಬದಿಂದ ರೈಲ್ವೆ ಯೋಜನೆಗಳು ತಡವಾಗುತ್ತಿದೆಯೇ, ಸಮಪಾಲು ವೆಚ್ಚ ಹಂಚಿಕೆ (Cost sharing) ವ್ಯವಸ್ಥೆಯಡಿ ಯೋಜನೆಗಳಿಗೆ ರಾಜ್ಯ ಸರ್ಕಾರ ತನ್ನ ಪಾಲಿನ ಅನುದಾನವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿರುವುದೇ; | ಯೋಜನೆಗಳಲ್ಲಿ ಯೋಜನೆಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ರೈಲ್ವೆ ಇಲಾಖೆಗೆ ಹಸ್ತಾಂತರಿಸುವ ಹೊಣೆಗಾರಿಕೆಯನ್ನು ರಾಜ್ಯ ಸರ್ಕಾರ ಸಹ ಹೊಂದಿರುತ್ತದೆ ಹಾಗೂ ಪ್ರಸ್ತಾಪಿತ ಯೋಜನೆಗಳ ಅಂದಾಜು ವೆಚ್ಚವು ರೂ.9192.24 ಕೋಟಿಗಳಿಂದ ರೂ.12146.98 ಗೆಏರಿಕೆಯಾಗಿದ್ದು (ರೂ.2945.74 ಕೋಟಿಗಳು ಏರಿಕೆ), ಅದರಂತೆ ರಾಜ್ಯ ಸರ್ಕಾರದ ಪಾಲು ರೂ.4792.87 ಕೋಟಿಗಳಿಂದ ರೂ.5757.27 ಕೋಟಿಗಳಿಗೆ ಏರಿಕೆಯಾಗಿರುತ್ತದೆ (ರೂ.964.40 ಕೊಟಿಗಳ ಏರಿಕೆ).<br><br>ಇದರಲ್ಲಿ ರಾಜ್ಯ ಸರ್ಕಾರದ ಪಾಲಿನ ಮೊತ್ತದಲ್ಲಿ ನಿರ್ಮಾಣಕ್ಕಾಗಿ ಈವರೆಗೆ ರೂ.2581.67 ಕೋಟಿಗಳನ್ನು ರೈಲ್ವೆ ಇಲಾಖೆಗೆ ಬಿಡುಗಡೆ ಮಾಡಲಾಗಿದೆ. ಈ ಯೋಜನೆಗಳಿಗೆ ಅಗತ್ಯವಿರುವ ಭೂಸ್ವಾಧೀನಕ್ಕಾಗಿ ರೂ.3012.66 ಕೋಟಿಗಳನ್ನು ಸಂಬಂಧಪಟ್ಟ ಜಿಲ್ಲಾಡಳಿತ / ಕೆಐಎಡಿಬಿಗೆ ಬಿಡುಗಡೆ ಮಾಡಲಾಗಿದೆ. |
| (ಈ) | ಪ್ರಸ್ತುತ ರೈಲ್ವೆ ಯೋಜನೆಗಳಿಗೆ ಒಟ್ಟಾರೆ ಎಷ್ಟು ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ; ಇನ್ನೂ ಹಸ್ತಾಂತರಿಸಬೇಕಿರುವ ಭೂಮಿಯ ಪ್ರಮಾಣ ಎಷ್ಟು; ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಪರಿಹಾರ ವಿತರಣೆ ಬಾಕಿಯಿದೆಯೇ; ಇದ್ದಲ್ಲಿ, ವಿಳಂಬಕ್ಕೆ ಕಾರಣವೇನು; ರೈಲ್ವೆ ಇಲಾಖೆ ಅಗತ್ಯಕ್ಕಿಂತ ಹೆಚ್ಚುವರಿ ಭೂಮಿಸ್ವಾಧೀನಪಡಿಸಿಕೊಳ್ಳುತ್ತಿರುವುದರಿಂದ ಪರಿಹಾರ ಮೊತ್ತ ಹೆಚ್ಚಾಗಿ ಯೋಜನೆ ವೆಚ್ಚ ಏರಿಕೆಯಾಗಿರುವುದೇ; | ಪ್ರಸ್ತುತ 9 ನೂತನ ರೈಲು ಮಾರ್ಗ ಯೋಜನೆಗಳು ಪ್ರಗತಿಯಲ್ಲಿದ್ದು, ಈ ಯೋಜನೆಗಳಿಗಾಗಿ 16914 ಎಕರೆಗಳ ಭೂಮಿ ಅಗತ್ಯವಿರುತ್ತದೆ. ಇದರಲ್ಲಿ ಈಗಾಗಲೇ 14122.17 ಎಕರೆಗಳ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ಬಾಕಿ ಉಳಿದಿರುವ 2793.03 ಎಕರೆಗಳ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.<br><br>ಈ ಯೋಜನೆಗಳ ಅಂದಾಜು ವೆಚ್ಚ ರೂ.9192.24 ಕೋಟಿಗಳಿಂದ ರೂ.12146.98 ಗೆ ಏರಿಕೆಯಾಗಿದ್ದು (ರೂ.2945.74 ಕೋಟಿಗಳು ಏರಿಕೆ), ಅದರಂತೆ ರಾಜ್ಯ ಸರ್ಕಾರದ ಪಾಲು ರೂ.4792.87 ಕೋಟಿಗಳಿಂದ ರೂ.5757.27 ಕೋಟಿಗಳಿಗೆ ಏರಿಕೆಯಾಗಿರುತ್ತದೆ (ರೂ.964.40 ಕೊಟಿಗಳ ಏರಿಕೆ). |
| (ಉ) | ಕರಾವಳಿ ಭಾಗದ ಜನವಸತಿ ಪ್ರದೇಶದಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್, ಮೇಲ್ಸೇತುವೆ, ಕೆಳಸೇತುವೆ, ಸರಕು ಶೆಡ್, ರೈಲ್ವೆ ನಿಲ್ದಾಣಗಳ ಅಭಿವೃದ್ಧಿ ಇತ್ಯಾದಿಗಳ ಕುರಿತಂತೆ ಮತ್ತು ಪ್ರಮುಖ ರೈಲ್ವೆ ಯೋಜನೆಗಳು ವಿಳಂಬವಾಗದಂತೆ ಭೂಸ್ವಾಧೀನ ಮತ್ತು ಅನುದಾನ ಬಿಡುಗಡೆ ಪ್ರಕ್ರಿಯೆಯನ್ನು ವೇಗಗೊಳಿಸಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳಲಿದೆ? | ರಾಜ್ಯ ಸರ್ಕಾರಕ್ಕೆ ರೈಲ್ವೆ ಇಲಾಖೆಯಿಂದ ಯಾವುದೇ ಪ್ರಸ್ತಾವನೆಯು ಸ್ವೀಕೃತವಾಗಿರುವುದಿಲ್ಲ. |

**ಸಂಖ್ಯೆ: ಮೂಅಇ 53ರಾರಾಹೆ 2026/ಇ**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕಾ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು